ನಿರ್ದೇಶನ ಹಾಗೂ ರಂಗಸಂಘಟನೆ ಮೂಲಕ ರಂಗಭೂಮಿಯಲ್ಲಿ ತೊಡಗಿಕೊಂಡಿರುವ ಇವರು ನೀನಾಸಂ ತಿರುಗಾಟ, ಚರಕ, ಕಿನ್ನರಮೇಳ, ಪ್ರೊಥಿಯೊ, ಸ್ಪಂದನ, ಕಾಗೋಡು ರಂಗಮಂಚ, ನಾವು ಮಂಡ್ಯ ಮುಂತಾದ ರಂಗ ತಂಡಗಳೊಂದಿಗೆ ಕೆಲಸ ಮಾಡಿದ್ದಾರೆ. 'ಜನಮನದಾಟ' ರಂಗತಂಡವನ್ನು ಕಳೆದ 11 ವರ್ಷಗಳಿಂದ ಸಂಘಟಿಸಿದ್ದಾರೆ. ಸೂರ್ಯನ ಕುದುರೆ, ಊರುಕೇರಿ, ಬದುಕು ಬಯಲು, ಬಾಬಾ ಸಾಹೆಬ ಅಂಬೇಡ್ಕರ್, ಶಾರ್ತೂಫ್, ಗಾಂಧಿ ವಿರುದ್ಧ ಗಾಂಧಿ, ಕುರುಕ್ಷೇತ್ರ, ಬುಗುರಿ, ನಾಟಕಗಳನ್ನು ನಿರ್ದೇಶಿಸಿರುವ ಇವರಿಗೆ 2007ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿಯು ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ ನೀಡಿ ಗೌರವಿಸಿದೆ.

## ಕಲಾವಿದರು:

**ಚಿದಂಬರ ಪೂಜಾರಿ**: ರಾಯಚೂರು ಜಿಲ್ಲೆ ಒಳ ಬಳ್ಳಾರಿಯವರಾದ ಇವರು ನೀನಾಸಂ ರಂಗಶಿಕ್ಷಣದಲ್ಲಿ ಪದವಿ ಪಡೆದು, ಮೈಸೂರಿನ ರಂಗಾಯಣ, ಜನಮನದಾಟ, ಕೋಲಾರದ ಆದಿಮದಂತಹ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದಾರೆ. ಏಕಲವ್ಯ ನಾಟಕಕ್ಕೆ META ಅತ್ಯುತ್ತಮ ಪೋಷಕನಟ ರಾಷ್ಟ್ರ ಪ್ರಶಸ್ತಿ ಪಡೆದ ಇವರು ಶಾಲಾ-ಕಾಲೇಜುಗಳಿಗೆ ನಾಟಕ ನಿರ್ದೇಶನ ಮಾಡಿದ್ದಲ್ಲದೆ ಚಲನಚಿತ್ರ ಮಾಧ್ಯಮದಲ್ಲೂ ತಮ್ಮ ಸಾಧನೆ ಮೆರೆದಿದ್ದಾರೆ.

**ಡಿಂಗ್ರಿ ನರೇಶ**: ರಾಯಚೂರು ತಾಲ್ಲೂಕಿನ ಆಶಾಪೂರದವರಾದ ಇವರು ನೀನಾಸಂ ಪದವಿ ಪಡೆದಿದ್ದು, ಜನಮನದಾಟ, ಆದಿಮ, ಅದಮ್ಯ ರಂಗತಂಡಗಳಲ್ಲಿ ನಟ ಮತ್ತು ಸಂಗೀತಗಾರನಾಗಿ ಕೆಲಸ ಮಾಡಿದ್ದಾರೆ. 'ಮತ್ತೆ ಏಕಲವ್ಯ' ನಾಟಕದ ಏಕಲವ್ಯ ಪಾತ್ರಕ್ಕೆ META ಅತ್ಯುತ್ತಮ ನಟ ರಾಷ್ಟ್ರೀಯ ಪ್ರಶಸ್ತಿ ಪಡೆದಿದ್ದಾರೆ. ಶಾಲಾ-ಕಾಲೇಜುಗಳಿಗೆ ಹಲವು ನಾಟಕಗಳನ್ನು ನಿರ್ದೇಶಿಸಿದ್ದಾರೆ. C/o FOOTPATH 2 ಸಿನಿಮಾದಲ್ಲಿ ನಟಿಸಿದ್ದಾರೆ.

**ಜಗ್ಗು ಶಿವಜಾನು**: ಶಿರಾ ತಾಲ್ಲೂಕಿನ ರಾಮನಹಳ್ಳಿಯವರಾದ ಇವರು ನೀನಾಸಂ ಪದವಿ ಪಡೆದಿದ್ದಾರೆ. ತಿಪಟೂರಿನ ಭೂಮಿ ರಂಗಪ್ರಯೋಗ ಶಾಲೆ, ನೀನಾಸಂ ತಿರುಗಾಟ, ಥಿಯೇಟರ್ ಸಮುರಾಯ್ ತಂಡಗಳಲ್ಲಿ ನಟರಾಗಿ ಕಾರ್ಯನಿರ್ವಹಿಸಿದ್ದಾರೆ.

**ಡಿ. ಪುರುಷೋತ್ತಮ**: ಬಳ್ಳಾರಿ ಜಿಲ್ಲೆಯ ಚಿಕ್ಕಜಾಯಗನೂರು ಗ್ರಾಮದ ಇವರು ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ 7 ವರ್ಷ ಸಂಗೀತ ಅಭ್ಯಾಸ, ಹುಬ್ಬಳ್ಳಿಯ ಡಾ. ಗಂಗೂಬಾಯಿ ಹಾನಗಲ್ ಗುರುಕುಲದಲ್ಲಿ 1 ವರ್ಷ ಅಭ್ಯಾಸ ನಡೆಸಿ, ಹಲವಾರು ಸಂಗೀತ ಕಾರ್ಯಕ್ರಮ ನೀಡಿದ್ದಾರೆ. ನೀನಾಸಂ ರಂಗಶಿಕ್ಷಣ ಕೇಂದ್ರದಲ್ಲಿ ಪದವಿ ಪಡೆದು, ನೀನಾಸಂ ತಿರುಗಾಟ, ಜನಮನದಾಟ, ಥಿಯೇಟರ್ ಸಮುರಾಯ್, ಕಿನ್ನರ ಮೇಳ ರಂಗತಂಡಗಳಲ್ಲಿ ಸಂಗೀತಗಾರನಾಗಿ ಕಾರ್ಯನಿರ್ವಹಿಸಿದ್ದಾರೆ.

**ಪ್ರದೀಪ್ ಕೆ.ಪಿ**: ನೀನಾಸಂ ಪದವಿಯೊಂದಿಗೆ 2008ರಲ್ಲಿ ರಂಗ ಅಭಿಯಾನ ಆರಂಭಿಸಿದ್ದ, ಕೇರಳದ ಇಡುಕ್ಕಿನವರಾದ ಇವರು ತಿರುವನಂತಪುರದ 'ಅಭಿನಯ ಥಿಯೇಟರ್ ರಿಸರ್ಚ್ ಸೆಂಟರ್'ನಲ್ಲಿ ನಟರಾಗಿ, ತಂತ್ರಜ್ಞರಾಗಿ 4 ವರ್ಷ ಕಾರ್ಯ ನಿರ್ವಹಿಸಿದ್ದಾರೆ. META, It folk, PRD,C.G.K, ಬಹುಮುಖ ಹಾಗೂ ಭಾರತದ ಹಲವಾರು ರಂಗೋತ್ಸವಗಳಲ್ಲಿ ನಟ, ತಂತ್ರಜ್ಞನಾಗಿ ಕಾರ್ಯ ನಿರ್ವಹಿಸಿದ್ದಾರೆ. ಮಲಯಾಳಂ ಸಿನಿಮಾಲ್ಲೂ ಕೆಲಸ ಮಾಡಿದ್ದಾರೆ.

**ಸತೀಶ ಕುಮಾರ ಬಗ್ಗವಳ್ಳಿ**: ಚಿಕ್ಕಮಗಳೂರು ಜಿಲ್ಲೆಯ ಬಗ್ಗವಳ್ಳಿಯವರಾದ ಇವರು ಗುಲ್ಬರ್ಗ ಮತ್ತು ಬೆಂಗಳೂರುಗಳಲ್ಲಿ ಸಂಗೀತಾಭ್ಯಾಸ ಮುಗಿಸಿ ನೀನಾಸಂ ತಿರುಗಾಟ, ಸುಗಮ ಸಂಗೀತ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿ, ಹಲವಾರು ನಾಟಕಗಳಿಗೆ ಸಂಗೀತ ನೀಡಿದ್ದಾರೆ.

**ಸಂತೋಷ ಟೊಣಪಿ**: ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರದವರಾದ ಇವರು ನೀನಾಸಂ ರಂಗಶಿಕ್ಷಣ ಕೇಂದ್ರದಲ್ಲಿ ಪದವಿ ಮುಗಿಸಿ, ಆರ್ಕೆಸ್ಟ್ರಾ ಗಾಯಕರಾಗಿ ಬೇರೆಬೇರೆ ತಂಡಗಳಲ್ಲಿ ನಟನಾಗಿ, ತಂತ್ರಜ್ಞನಾಗಿ ಕೆಲಸ ಮಾಡಿದ್ದಾರೆ.

**ಅಕ್ಷತ ನಾಯ್ಕ್**: ಕಾರವಾರ ಜಿಲ್ಲೆಯ ಕುಮಟದವರಾದ ಇವರು ಥಿಯೇಟರ್ ಸಮುರಾಯ ಮತ್ತು ಕನ್ನಡ ರಂಗಭೂಮಿಯ ಹೆಸರಾಂತ 'ಮಲೆಗಳಲ್ಲಿ ಮದುಮಗಳು' ನಾಟಕದಲ್ಲಿ ಅಭಿನಯಿಸಿದ್ದಲ್ಲದೆ, ಮಕ್ಕಳಿಗೆ ನೃತ್ಯ, ನಾಟಕಗಳನ್ನು ನಿರ್ದೇಶಿಸಿದ್ದಾರೆ.

**ಲಕ್ಕಿಮರದ ಶಾರದ**: ಬಳ್ಳಾರಿ ಜಿಲ್ಲೆಯ ಮರಿಯಮ್ಮನಹಳ್ಳಿ ಗ್ರಾಮದವರಾದ ಇವರು ನಾಟ್ಯಕಲಾ ರಂಗತಂಡ, ಆಟಮಾಟ, ಬಿಜಾಪುರದ ಕಾಲೇಜು ರಂಗಪಯಣ ತಂಡಗಳ ನಾಟಕಗಳಲ್ಲಿ ಅಭಿನಯಿಸಿದ್ದಾರೆ.


## ಕೃತಜ್ಞತೆಗಳು:

ಕೆ.ವಿ. ಅಕ್ಷರ, ಪ್ರಸನ್ನ, ಬಿ.ಆರ್. ವೆಂಕಟರಮಣ ಐತಾಳ, ಜೋಗನಶಂಕರ್, ರಹಮತ್ ತರಿಕೆರೆ, ಕೆ.ಜಿ. ಕೃಷ್ಣಮೂರ್ತಿ, ಎಂ.ಎಂ. ಕೃಷ್ಣಮೂರ್ತಿ ಸರ್ಫ್ರಾಜ್ ಚಂದ್ರಗುತ್ತಿ, ಶಕಿಲ್ ಅಹಮ್ಮದ್, ಕೆ.ಪಿ. ಲಕ್ಷ್ಮಣ, ರಫೀಕ್ ಸಾಗರ, ಸುಜಾತ, ಎ. ಬಸು, ಮಂಜುನಾಥ ಹಿರೇಮಠ, ಎನ್.ಎ.ಎಂ. ಇಸ್ಮಾಯಿಲ್, ನೀನಾಸಂ, ಚರಕ, ಕಿನ್ನರಮೇಳ ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸುತ್ತಿರುವ ನಿಮಗೆ.



**ಸಂಪರ್ಕ: ಡಾ.ಎಂ. ಗಣೇಶ - 9900257750**



ಬ್ರೋಷರ್ ವಿನ್ಯಾಸ: ವೈಷ್ಣವಿ ಗ್ರಾಫಿಕ್ಸ್


**ಸತ್ಯಶೋಧನ ರಂಗಸಮುದಾಯ ಹೆಗ್ಗೋಡು (ರಿ)**

**ಅರ್ಪಿಸುವ, 'ಜನಮನದಾಟ' ಅಭಿನಯಿಸುವ**

**ಪ್ರವಾದಿ ಮುಹಮ್ಮದರ ಜೀವನಾಧಾರಿತ ಮೊತ್ತಮೊದಲ ಐತಿಹಾಸಿಕ ನಾಟಕ**

# ಓದಿರಿ

(ನಾಟಕದ ಯಾವುದೇ ದೃಶ್ಯದಲ್ಲೂ ಪ್ರವಾದಿ ಮುಹಮ್ಮದರ ಪಾತ್ರವನ್ನು ತೋರಿಸಲಾಗುವುದಿಲ್ಲ.)



**ರಚನೆ:**
**ಬೊಳುವಾರು ಮಹಮದ್ ಕುಂಞ**

**ಪರಿಕಲ್ಪನೆ, ವಿನ್ಯಾಸ, ನಿರ್ದೇಶನ:**
**ಡಾ. ಎಂ. ಗಣೇಶ ಹೆಗ್ಗೋಡು**

**ಸಂಗೀತ:**
**ಡಿ.ಪುರುಷೋತ್ತಮ, ಸತೀಶ ಕುಮಾರ ಬಗ್ಗವಳ್ಳಿ, ಅರುಣ ಕುಮಾರ ಎಂ., ಸುಹಾನ ಎಂ.**

## ಸತ್ಯಶೋಧನ ರಂಗಸಮುದಾಯ

**ಸ**ಮಾಜದಲ್ಲಿರುವ ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವದ ಕನಸುಗಳು ನನಸಾಗಬೇಕೆಂಬ ಹಂಬಲ ಹಾಗೂ 'ನೀನಾಸಂ ರಂಗಶಿಕ್ಷಣ ಕೇಂದ್ರ'ದ 2 ತಿಂಗಳ ರಜಾ ಅವಧಿ ಕ್ರಿಯಾಶೀಲವಾಗಿರಬೇಕೆಂಬ ಬಯಕೆಯಿಂದ ಕಳೆದ 11 ವರ್ಷಗಳಿಂದ ನೀನಾಸಂ ಅಧ್ಯಾಪಕರಾದ ಡಾ. ಎಂ.ಗಣೇಶರ ನೇತೃತ್ವದಲ್ಲಿ ನೀನಾಸಂ ಪದವೀಧರರು ಮತ್ತು ಇತರ ರಂಗಾಸಕ್ತರು ಕಟ್ಟಿ ಬೆಳೆಸಿದ ರಂಗತಂಡ 'ಜನಮನದಾಟ' 2016ರಿಂದ ಸತ್ಯಶೋಧನ ರಂಗಸಮುದಾಯ ಹೆಗ್ಗೋಡು (ರಿ) ಎಂದು ಅಧಿಕೃತವಾಗಿ ನೋಂದಾವಣೆಗೊಂಡು, ತನ್ನ 'ರಂಗಕಾಯಕ ಮುಂದುವರಿಸುತ್ತಿದೆ. 'ಜನಮನದಾಟ'ವು ಗುರುತಿಸಲ್ಪಟ್ಟಿರುವುದು ಅದರ ಸರಳತೆ ಮತ್ತು ಬದ್ಧತೆಗಾಗಿ. ಹಾಗೆ ನೋಡಿದರೆ ಜಗತ್ತಿನ ಎಲ್ಲ ಮನುಷ್ಯರೂ ಆಳದಲ್ಲಿ ಸರಳ ಜೀವಿಗಳೇ. ಅಷ್ಟೇ ಅಲ್ಲ; ವಿಶ್ವದ ಆರಂಭಿಕ ರಂಗಭೂಮಿಗಳು ಸರಳವಾಗಿರುವವೇ ಆಗಿವೆ. ಸರಳತೆ ಎಂದರೆ ಏನೂ ಇಲ್ಲದ್ದು ಎಂಬರ್ಥವಲ್ಲ, ಸತ್ಯವಂತಿಕೆ ಮತ್ತು ಕಲಾಸೌಂದರ್ಯದಲ್ಲಿ ಬಹಳ ಶ್ರೀಮಂತವಾದುದು ಅದು. ಕಳೆದ 11 ವರ್ಷಗಳ 'ಜನಮನದಾಟ'ದ ರಂಗಯಾತ್ರೆಯು 'ಬಡವರ ನಗುವಿನ ಶಕ್ತಿ'. ಈ ಬಡವರ ನಗುವಿನ ಶಕ್ತಿಯೇ 'ಶ್ರದ್ಧಾ ಮತ್ತು ಹಣತೆ', 'ಉಚಲ್ಯಾ', 'ರಹಸ್ಯವಿಶ್ವ', 'ತಬರನ ಕಥೆ', 'ಸೂರ್ಯನ ಕುದುರೆ', 'ಊರುಕೇರಿ', 'ಬಾಬಾ ಸಾಹೇಬ್ ಅಂಬೇಡ್ಕರ್', 'ಬದುಕು ಬಯಲು' ಹಾಗೂ 'ಸತ್ಯಶೋಧಕ' ಮೊದಲಾದ ನಾಟಕಗಳನ್ನು ಸಿದ್ಧಪಡಿಸಿ 550ಕ್ಕೂ ಹೆಚ್ಚಿನ ಯಶಸ್ವೀ ಪ್ರದರ್ಶನಗಳನ್ನು ದೇಶದಾದ್ಯಂತ ನೀಡಿದೆ. 'ಊರುಕೇರಿ' ನಾಟಕವು 118 ಯಶಸ್ವಿ ಪ್ರದರ್ಶನಗಳನ್ನು ನೀಡಿದ್ದರೆ, ಬದುಕು ಬಯಲು, ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಸತ್ಯಶೋಧಕ ನಾಟಕಗಳ ಪ್ರದರ್ಶನಗಳು ಶತಕದಗಡಿ ಮುತ್ತುತ್ತಿದ್ದು, ಬಡವರ ನಗುವಿನ ಬೆಂಕಿಯಲ್ಲಿ ಬೆಂದ 'ಜನಮನದಾಟ'ದ ಪ್ರತಿಭೆಗಳು ಬಂಗಾರದ ಪ್ರತಿಮೆಗಳಾಗಿ ಪ್ರತಿಫಲಿಸುತ್ತಿದ್ದಾರೆ. ಈ'ಪ್ರತಿಮೆ'ಗಳೇ ಇದೀಗ 'ಓದಿರಿ'ಯ ರಂಗರೂಪ ಸಿದ್ಧಪಡಿಸಿ ನಿಮ್ಮ ಮುಂದೆ ಬರುತ್ತಿದ್ದಾರೆ.

## ಲೇಖಕರ ಮಾತು...

**'ಯಾ**ವುದೇ ದೃಶ್ಯದಲ್ಲೂ ಪ್ರವಾದಿ ಮುಹಮ್ಮದರ ಪಾತ್ರವನ್ನು ತೋರಿಸಲಾಗುವುದಿಲ್ಲ'ಎಂಬ ನಿರೀಕ್ಷಣಾ ಜಾಮೀನಿನೊಂದಿಗೇ, ಹೆಗ್ಗೋಡಿನ ಗೆಳೆಯ ಡಾ.ಎಂ. ಗಣೇಶ್ ನನ್ನ 'ಓದಿರಿ' ಕಾದಂಬರಿಯನ್ನು ನಾಟಕ ರೂಪದಲ್ಲಿ ಪ್ರದರ್ಶಿಸಲು ಅನುಮತಿ ಕೇಳಿದಾಗ 'ಇಲ್ಲ'ವೆನ್ನಲು ಕಾರಣಗಳೇ ಉಳಿದಿರಲಿಲ್ಲ. ಅಂತಿಮ ಪ್ರವಾದಿ ಮುಹಮ್ಮದರ ಜೀವನಾಧಾರಿತ ಮೊತ್ತಮೊದಲ ಐತಿಹಾಸಿಕ ಕಾದಂಬರಿಯಂತೆಯೇ 'ಸತ್ಯಶೋಧನ ರಂಗಸಮುದಾಯದ' ಈ ನಾಟಕವೂ ರಂಗಭೂಮಿಯ ಇತಿಹಾಸದಲ್ಲಿ ಮೊತ್ತ ಮೊದಲನೆಯದು. 'ಓದಿರಿ' ಕಾದಂಬರಿಯ ಬರವಣಿಗೆಯ ಹಿಂದಿದ್ದ ನನ್ನಾಸೆ ಬಹಳ ಸಣ್ಣದು. ಹೋಟೆಲೊಂದರೊಳಗೆ ಪಕ್ಕದ ನಲ್ಲಿಯಲ್ಲಿ ಕೈ ತೊಳೆಯುತ್ತಿದ್ದವರು ಅಕಸ್ಮಾತ್ ನಮ್ಮ ಉಡುಪಿನ ಮೇಲೆ ನೀರು ಚೆಲ್ಲಿದರೆ, ಅವರು ಅಪರಿಚಿತರಾಗಿದ್ದರೆ ಮುನಿಸಿಕೊಳ್ಳುತ್ತೇವೆ, ಪರಿಚಿತರಾಗಿದ್ದರೆ 'ಪರವಾಗಿಲ್ಲ ಬಿಡಿ' ಎಂದು ನಕ್ಕು ಸುಮ್ಮನಾಗುತ್ತೇವೆ. ಯಾವುದೇ ಒಂದು ಧರ್ಮವನ್ನು ಸಮರ್ಥಿಸುವ ಅಥವಾ ವಿರೋಧಿಸುವ ಮೊದಲು, ಕನಿಷ್ಠ ಒಂದು ಬಾರಿಯಾದರೂ ಓದಿಕೊಳ್ಳುವುದು ಒಳ್ಳೆಯದು ಎಂಬುದು ನನ್ನ ನಂಬಿಕೆ. ಹೀಗೆ ಓದಿಕೊಂಡು, ನೋಡಿಕೊಂಡು, ಅರಿತುಕೊಂಡು ನಾವೆಲ್ಲರೂ ಅಲ್ಪಸ್ವಲ್ಪವಾದರೂ ಪರಿಚಿತರಾದರೆ ನಮ್ಮ ಅಲ್ಪಸ್ವಲ್ಪ ತಪ್ಪುಗಳಾದರೂ ಮನಿಸಲ್ಪಡಬಹುದೇನೋ ಎಂಬುದು ನನ್ನ ಆಸೆ. ನನ್ನ ಆಸೆಗೆ ರಂಗರೂಪ ನೀಡಿ ಬೆಂಬಲಿಸುತ್ತಿರುವ 'ರಂಗಸಮುದಾಯದ' ಗೆಳೆಯರಿಗೆ ನಾನು ಕೃತಜ್ಞ.

## ನಿರ್ದೇಶಕರ ಮಾತು...

ನನ್ನ ಮೆಚ್ಚಿನ ಸಾಹಿತಿ ಬೊಳುವಾರು ಮಹಮದ್ ಕುಂಞ ಅವರ 'ಓದಿರಿ' ಕಾದಂಬರಿ ನನ್ನನ್ನು ಇನ್ನಿಲ್ಲದಂತೆ ಕಾಡಿದ ಕೃತಿ. ಮಿತ್ರರಾದ ಸಫ್ರಾಜ್ ಚಂದ್ರಗುತ್ತಿ ಇದನ್ನು ಓದಲು ಕೊಟ್ಟು ಮಹದುಪಕಾರ ಮಾಡಿದ್ದಾರೆ. ಕಳೆದ ಧಾರವಾಡ 'ಸಾಹಿತ್ಯ ಸಂಭ್ರಮ'ದಲ್ಲಿ ಐತಿಹಾಸಿಕ ಕಾದಂಬರಿಗಳ ಓದು ಗೋಷ್ಠಿಗಾಗಿ ಯಾವುದಾದರೂ ಕಾದಂಬರಿ ಓದುವಂತೆ ಹಿರಿಯರಾದ ಶ್ರೀ ಗಿರಡ್ಡಿಯವರು ನನ್ನನ್ನು ಆಹ್ವಾನಿಸಿದ್ದರು. ಆಗ 'ಓದಿರಿ' ಕಾದಂಬರಿಯ ಕೆಲವು ಭಾಗಗಳನ್ನು ಆಯ್ದುಕೊಂಡು ಓದಲಾರಂಭಿಸಿದಾಗ, ಕಿಕ್ಕಿರಿದು ತುಂಬಿದ್ದ ಸಭಾಂಗಣ ಬರೆದಿಟ್ಟ ಚಿತ್ರದಂತೆ ತಲ್ಲೀನವಾಗಿ ಪ್ರವಾದಿ ಮುಹಮ್ಮದರ ವಿಚಾರಗಳಿರುವ ಆ ಓದನ್ನು ಮನದುಂಬಿಕೊಂಡಿತು. ಓದು ಮುಗಿದನಂತರ ನನ್ನನ್ನು ಸುತ್ತ ಮುತ್ತಿಕೊಂಡ ಸಹೃದಯರು ಓದಿನ ಸವಿಯನ್ನು ಹಂಚಿಕೊಂಡು ಕೃತಿಯ ಕುರಿತು ಕುತೂಹಲದಿಂದ ಕೇಳತೊಡಗಿದರು. ಇದರಿಂದ ಪ್ರೇರೇಪಿತನಾದ ನಾನು 'ಓದಿರಿ' ಕೃತಿಯನ್ನು ನಾಟಕ ಮಾಡುವ ಮೂಲಕ ಮತ್ತಷ್ಟು ಜನರನ್ನು ಸಾಹಿತ್ಯ ಮತ್ತು ರಂಗಭೂಮಿಯ ಸಂಪರ್ಕಕ್ಕೆ ತಂದುಕೊಳ್ಳ ಬೇಕೆನ್ನಿಸಿತು. ನಾವೇನೇ ಕಸರತ್ತು ಮಾಡಿ ಸಾಹಿತ್ಯ ಬರೆದು ರಂಗಭೂಮಿ ಮಾಡಿದರೂ ಕೆಲವು ಸಮುದಾಯಗಳು ದೂರವೇ ಉಳಿದಿರುವುದು ನನ್ನನ್ನು ಸದಾಕಾಡುತ್ತಿತ್ತು. ನಮ್ಮೆಲ್ಲಾ ಸಮುದಾಯಗಳ ಕಷ್ಟಸುಖಗಳು ರಂಗಭೂಮಿಯವರಾದ ನಮ್ಮವೇ ಆಗಿರುವುದರಿಂದ, 'ಓದಿರಿ' ಕೃತಿಯನ್ನು ನಾಟಕವಾಗಿ ಕಟ್ಟಿ ನಿಮ್ಮ ಮುಂದೆ ಇಟ್ಟಿದ್ದೇನೆ. ಹಿರಿಯ ಚಿಂತಕ ಶೆಲ್ಡನ್ ಪೊಲಾಕ್ ಹೇಳಿದಂತೆ, ಗ್ರೀಸಿಗೆ, ಚೀನಾಕ್ಕೆ, ಭಾರತಕ್ಕೆ ಭೌಗೋಳಿಕ ಸೀಮೆಗಳಿದ್ದರೂ ಸಾಂಸ್ಕೃತಿಕ ಸೀಮೆಗಳಿಲ್ಲ. ಭೌಗೋಳಿಕ ಸರಹದ್ದುಗಳ ಚರ್ಚೆ ರಾಜಕಾರಣಿಗಳಿಗಿರಲಿ, ನಾವು ಸಾಂಸ್ಕೃತಿಕ ಸರಹದ್ದುಗಳನ್ನು ಚಲನಶೀಲವಾಗಿಸೋಣ. ಹಲವು ಜಗತ್ತುಗಳನ್ನು ಅರ್ಥಮಾಡಿಕೊಳ್ಳುವ ದಾರಿಯಿದು. 'ಓದಿರಿ'ಯ ದಾರಿಯು ಅದೇ ಆಗಿದೆ.

## ಲೇಖಕರು:

**ಕ**ನ್ನಡ ಗದ್ಯಸಾಹಿತ್ಯಕ್ಕೆ ಮುಸ್ಲಿಂ ಬದುಕನ್ನು ಮೊತ್ತಮೊದಲ ಬಾರಿಗೆ ಪರಿಚಯಿಸಿದ ಬೊಳುವಾರು ಮಹಮದ್ ಕುಂಞ (1951) ಮೈಸೂರು ವಿಶ್ವವಿದ್ಯಾಲಯದಿಂದ ಕುವೆಂಪು ಬಂಗಾರದ ಪದಕ ಸಹಿತ ಕನ್ನಡ ಸ್ನಾತಕೋತ್ತರ ಪದವೀಧರರು. ಸಿಂಡಿಕೇಟ್ ಬ್ಯಾಂಕಿನ ಪ್ರಚಾರ ವಿಭಾಗದ ಪ್ರಧಾನ ವ್ಯವಸ್ಥಾಪಕರಾಗಿ ನಿವೃತ್ತರಾಗಿರುವ ಇವರು ಕನ್ನಡ ಸಾಹಿತ್ಯದಲ್ಲಿ ತಮ್ಮ ಕತೆ, ಕಾದಂಬರಿ, ಮಕ್ಕಳ ಸಾಹಿತ್ಯ, ನಾಟಕ, ಅನುವಾದ ಹಾಗೂ ರಂಗ ಚಟುವಟಿಕೆಗಳ ಮೂಲಕ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದವರು. ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಕನ್ನಡದ ಮಕ್ಕಳ ಸಾಹಿತ್ಯಕ್ಕೆ ಮೊತ್ತಮೊದಲ ಪ್ರಶಸ್ತಿ ತಂದುಕೊಟ್ಟ ಇವರು, ಕರ್ನಾಟಕ ಸಾಹಿತ್ಯ ಅಕಾಡೆಮಿಯಂದ ಗೌರವ ಪ್ರಶಸ್ತಿ ಸಹಿತ ಮೂರು ಬಾರಿ ಪ್ರಶಸ್ತಿ ಗಳಿಸಿದ್ದಾರೆ. ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ, ಕಲ್ಕತ್ತಾದ ಭಾರತೀಯ ಭಾಷಾ ಸಂಸ್ಥಾನ ಪ್ರಶಸ್ತಿ, ದೆಹಲಿಯ ಕಥಾ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ, ಬಸವರಾಜ ಕಟ್ಟೀಮನಿ ಪ್ರಶಸ್ತಿ, ವಿಶುಕುಮಾರ್ ಪ್ರಶಸ್ತಿ, ತೌಳವ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ಚಡಗ ಪ್ರಶಸ್ತಿ, ಪರಶುರಾಮ ಪ್ರಶಸ್ತಿ, ಅಬುದಾಬಿಯ BWF ಪ್ರಶಸ್ತಿ ಹೀಗೆ ಹಲವು ಶ್ರೇಷ್ಠ ಪ್ರಶಸ್ತಿಗಳಿಂದ ಸನ್ಮಾನಿತರಾಗಿದ್ದಾರೆ. 'ಸಮುದಾಯ'ಸಂಘಟನೆಯ ರಾಜ್ಯಾಧ್ಯಕ್ಷರಾಗಿ, 'ಬಂಡಾಯ ಸಾಹಿತ್ಯ ಸಂಘಟನೆ'ಯ ರಾಜ್ಯ ಸಂಚಾಲಕರಾಗಿ ಕೆಲಸ ಮಾಡಿದ್ದಾರೆ.



### ನಿರ್ದೇಶಕರು:

**ಬೆಂ**ಗಳೂರು ಜಿಲ್ಲೆಯ ಹೊಸಕೋಟೆ ತಾಲೂಕಿನ ತಿಮ್ಮಪ್ಪನ ಹಳ್ಳಿಯಲ್ಲಿ ಜನಿಸಿದ ಡಾ. ಎಂ. ಗಣೇಶ್ (1974) ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಸ್ನಾತಕೋತ್ತರ ಪದವಿಯ ಜೊತೆಗೆ 'ನೀನಾಸಂ ರಂಗ ಶಿಕ್ಷಣ' ಪದವಿ ಪಡೆದು ಅಲ್ಲೇ ಅಧ್ಯಾಪಕರಾಗಿದ್ದಾರೆ. ಇವರ 'ಕನ್ನಡ ರಂಗಭೂಮಿಯ ಹೊಸ ಸಾಧ್ಯತೆಗಳು' ಎಂಬ ಸಂಶೋಧನಾ ಪ್ರಬಂಧಕ್ಕೆ ಕುವೆಂಪು ವಿಶ್ವವಿದ್ಯಾನಿಲಯವು ಡಾಕ್ಟರೇಟ್ ನೀಡಿದೆ. ನಟನೆ,

